ಮೂಲ ದಾವಾ ಸಂಖ್ಯೆ . 211/2016 ಪಿ ಡಬ್ಲ್ಯೂ 3

(ದಿನಾಂಕ 01-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಸಿ ಎಸ್ ವಕೀಲರಿಂದಃ-

ನನ್ನ ಜನನದಿಂದಲೂ ಹೊಸಕೇರಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನನ್ನ ಸಾಕ್ಷ್ಯ ಪ್ರಮಾಣಪತ್ರವನ್ನು ದೊಡ್ಡ ಈರಪ್ಪರವರು ಹೇಳಿ ಬರೆಸಿರುತ್ತಾರೆ. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು. ದಾವಾಸ್ತಿ ವಾದಿಯ ಹೆಸರಿಗೆ ಹೇಗೆ ಬಂತು ಎಂದರೆ ಸಾಕ್ಷಿಯು ದಾವಾಸ್ತಿ ನನ್ನ ಹೆಸರಿಗೆ ಇದೆ ಅಂತಾ ವಾದಿಯು ನನಗೆ ತಿಳಿಸಿದ್ದರು ಎನ್ನುತ್ತಾರೆ. ದಾವಾಸ್ತಿಯಿಂದ 3 ನೇ ಮನೆ ನನ್ನದೇ ಇರುತ್ತದೆ. ನಮ್ಮ ಮನೆಯ ನಂಬರ್ ನನಗೆ ಗೊತ್ತಿಲ್ಲ. ನಮ್ಮ ಮನೆಯ ಚಕ್ಕುಬಂದಿ ಪೂಃಕೂಡ್ಲಿಗಿ ರಸ್ತೆ, ಪಃ ಬಯಲು ಜಾಗ ಪಂಚಾಯ್ತಿಗೆ ಸೇರಿದ್ದು, ಉಃ ಬಾಲಪ್ಪ ಇವರ ಸ್ವತ್ತು ಮತ್ತು ದಃ ಸಣ್ಣೀರಪ್ಪ ಇವರ ಸ್ವತ್ತು ಬರುತ್ತದೆ. ಸಣ್ಣೀರಪ್ಪ ಇವರ ಆಸ್ತಿಯ ದಕ್ಷಿಣ ದಿಕ್ಕಿಗೆ 1 ನೇ ಪ್ರತಿವಾದಿಯ ಆಸ್ತಿ ಇರುತ್ತದೆ. 1 ನೇ ಪ್ರತಿವಾದಿ ಮತ್ತು ಅವರ ಮಗ ಅದೇ ಆಸ್ತಿಯಲ್ಲಿ ವಾಸವಾಗಿರುತ್ತಾರೆ. ದಾವಾ ಸ್ವತ್ತಿನ ಚಕ್ಕುಬಂದಿ ಪೂಃ ಕೂಡ್ಲಿಗಿ ರಸ್ತೆ, ಪಃ ಈಗ ಒಂದು ಹೊಸಮನೆಯಾಗಿದೆ, ಉಃ ಸಣ್ಣೀರಪ್ಪರವರ ಸ್ವತ್ತು ಮತ್ತು ದಃ ನಾಗರಾಜ ಇವರ ಸ್ವತ್ತು ಇರುತ್ತದೆ.

ನನಗೆ ಪ್ರತಿವಾದಿಯರು ಗೊತ್ತು ಆದರೆ ಚನ್ನಮ್ಮರವರು ಗೊತ್ತಿಲ್ಲ. ನನ್ನ ಮನೆಯ ದಕ್ಷಿಣ ದಿಕ್ಕಿಗೆ ಒಂದು ಮನೆಯ ನಂತರ 1 ನೇ ಪ್ರತಿವಾದಿಯರು ಇರುತ್ತಾರೆ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರು ವಾಸವಾಗಿರುತ್ತಾರೆಂದರೆ ಸರಿ. ದಶಮಾಪುರ ಗ್ರಾಮ ಪಂಚಾಯ್ತಿ ಸುಮಾರು 30 ವರ್ಷದ ಹಿಂದೆ ಆಗಿರಬಹುದು. ವಾದಿ ಮತ್ತು ನಾನು ತುಂಬಾ ಪರಿಚಯಸ್ಥರು ಎಂದರೆ ಸರಿ. ಅವರು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಹೇಳಿದ್ದರಿಂದ ನಾನು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ. ದಾವಾ ಸ್ವತ್ತಿನ ಬಗ್ಗೆ ನನಗೆ ಮಾಹಿತಿ ಇಲ್ಲವೆಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ